**ದಿನಾಂಕ: 13-01-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಬಿ. ವಕೀಲರಿಂದ**

1. ನನಗೆ ಕನ್ನಡ ಓದಲು ಬರೆಯಲು ಮತ್ತು ಮಾತನಾಡಲು ಬರುವುದಿಲ್ಲ. ಸಂಜು ರಾಠೋಡ ಎನ್ನುವವರು ನನ್ನ ಸಂಬಂಧಿಕರಾಗಬೇಕು. ವಿನೋದ ನಾಯಕ ಸಂಜು ರಾಠೋಡನ ಸ್ನೇಹಿತನಾಗಬೇಕು. ಸಂಜು ರಾಠೋಡ ನನಗೆ ಮೊದಲಿನಿಂದಲೂ ಗೊತ್ತು. ವಿನೋದ ನಾಯಕ 2-3 ತಿಂಗಳಿನಿಂದ ಪರಿಚಯ ಇರುತ್ತಾರೆ. ನಾನು ಮುಂಬೈಯಲ್ಲಿ Building Constrction ಕೆಲಸ ಮಾಡುತ್ತಿದ್ದೇನೆ. ಬನನಿಹಾಳದಲ್ಲಿ ನನ್ನದಾಗಲೀ ನನ್ನ ಕುಟುಂಬದ ಸದಸ್ಯರದಾಗಲೀ ಮತ್ತು ಸಂಬಂಧಿಕರದ್ದಾಗಲೀ ಯಾವುದೇ ಆಸ್ತಿ ಇರುವುದಿಲ್ಲ. ಕೋಡ್ಲಿ ಗ್ರಾಮದಲ್ಲಿ ನನಗೆ 4 ಎಕರೆ ಜಮೀನು ಇರುತ್ತದೆ. ಕೋಡ್ಲಿ ಗ್ರಾಮದಿಂದ ಬದನಿಹಾಳ ಗ್ರಾಮ ಸುಮಾರು 200 ಕಿ.ಮೀ. ದೂರ ಆಗುತ್ತದೆ ಎಂದರೆ ಸರಿ. ಕೋಡ್ಲಿಯಲ್ಲಿ ಇರುವಂತಹ ಜಮೀನು ಬಿಟ್ಟು ಬೇರೆ ಎಲ್ಲಿಯಾದರೂ ಜಮೀನು ಇದೆಯಾ ಎಂದರೆ ಬಾಂಬೆಯಲ್ಲಿ ಖರೀದಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನೀವು ಬೇರೆಯವರಿಗೆ ಅವಶ್ಯಕತೆ ಇದ್ದಾಗ ಹಣ ನೀಡುತ್ತೀರಿ ಎಂದರೆ ಸರಿಯಲ್ಲ.

2. ಬದನಿಹಾಳದಲ್ಲಿ ಇರುವ ಜಮೀನು ನೀರಾವರಿ ಜಮೀನು ಇರುತ್ತದೆ. ಸದರಿ ಜಮೀನನ್ನು ಯಾರು ಸಾಗುವಳಿ ಮಾಡುತ್ತಾರೆ ಎಂದರೆ ಪ್ರತಿವಾದಿ ಮಾಡುತ್ತಾನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಮುಂಬೈ, ಪುಣೆ ಮಹಾರಾಷ್ಟ್ರದಲ್ಲಿ ಇರುತ್ತಾರೆ ಎಂದರೆ ಸಾಗುವಳಿ ಮಾಡುವಾಗ ಇಲ್ಲಿಯೇ ಇರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗೆ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಯಾವುದಾದರೂ ಜಮೀನು ಇದೆಯಾ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ಮನೆ ಬದನಿಹಾಳ ತಾಂಡಾದಲ್ಲಿ ಇರುತ್ತದೆ. ಪ್ರತಿವಾದಿಗೆ ಒಬ್ಬಳು ಮಗಳು ಎಂದು ಹೇಳಿದ್ದರು ಆದರೆ ಗೊತ್ತಿಲ್ಲ. ನಾನು ಕರಾರು ಪತ್ರ ಮಾಡಿಕೊಳ್ಳುವಾಗ ಪ್ರತಿವಾದಿಯ ಹೆಂಡತಿ ಮಕ್ಕಳ ಬಗ್ಗೆ ಕೇಳಿಲ್ಲ. ಪ್ರತಿವಾದಿಯ ಮನೆಗೆ ಹೋದಾಗ ಪ್ರತಿವಾದಿಯ ಹೆಂಡತಿ

ಮತ್ತು ಮಗಳು ಇದ್ದಳು. ಖರೀದಿ ಕರಾರು ಪತ್ರಕ್ಕೆ ಪ್ರತಿವಾದಿಯ ಹೆಂಡತಿ ಮತ್ತು ಮಗಳ ಸಹಿ ಏನಾದರೂ ಪಡೆದುಕೊಳ್ಳಬೇಕು ಎಂದು ಹೇಳಿದ್ದೀರಾ ಎಂದರೆ ಹೇಳಿಲ್ಲ ಎಂದು ಉತ್ತರಿಸುತ್ತಾರೆ.

3. ದಾವಾದ ಆಸ್ತಿಯು ಪ್ರತಿವಾದಿಗೆ ಅವರ ಹಿರಿಯರಿಂದ ಬಂದ ಆಸ್ತಿ ಎಂದರೆ ಗೊತ್ತಿಲ್ಲ. ಮಾತುಕತೆಯಾದ ಸಮಯದಲ್ಲಿ ಪ್ರತಿವಾದಿಗೆ ದಾವಾ ಆಸ್ತಿ ಯಾವ ರೀತಿ ಬಂದಿದೆ ಎಂದು ಕೇಳಿಲ್ಲ ಮತ್ತು ನೋಡಿಲ್ಲ. ಪ್ರತಿವಾದಿಗೆ ವಿನಿತಾ, ರಾಜೇಶ್ವರಿ, ರೋಷನ್, ಮಿಥುನ ಮತ್ತು ಸುಮಿತ್ರಾ ಎಂಬ ಮಕ್ಕಳು ಇದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ಹೆಂಡತಿಯ ಹೆಸರು ಕಸ್ತೂರಿಬಾಯಿ ಎಂದರೆ ಗೊತ್ತಿಲ್ಲ.

4. ದಾವಾದ ಆಸ್ತಿಯ ಅಕ್ಕಪಕ್ಕದಲ್ಲಿ ಇರುವ ಜಮೀನುಗಳ ಸರ್ವೆ ನಂಬರ್ ಗೊತ್ತಿಲ್ಲ. ಈ ವ್ಯವಹಾರ ಆಗುವುದನ್ನು ಬಿಟ್ಟು ಏನಾದರೂ ವ್ಯವಹಾರ ಆಗಿದೆಯೇ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಮುಂಬೈಯಲ್ಲಿ ನಾನು ಫ್ಲಾಟನ್ನು ಖರೀದಿ ಮಾಡಿರುತ್ತೇನೆ. ಫ್ಲಾಟ್ ಖರೀದಿ ಮಾಡುವ ಸಮಯದಲ್ಲಿ ಸದರಿ ಫ್ಲಾಟ್ ಅವರಿಗೆ ಯಾವ ರೀತಿ ಬಂದಿದೆ ಎಂದು ಮತ್ತು ಅವರ ಕುಟುಂಬದ ಸದಸ್ಯರ ಒಪ್ಪಿಗೆ ಪಡೆದುಕೊಳ್ಳುವ ವಿಷಯ ಗೊತ್ತು. ಖರೀದಿ ಕರಾರು ಪತ್ರವನ್ನು ರಜಿಸ್ಟರ್ ಆಗುವ ಸಮಯದಲ್ಲಿ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳನ್ನು ಕರೆದಿರುತ್ತೇವೆ ಆದರೆ ಅವರು ಬಂದಿರುವುದಿಲ್ಲ. ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಆ ದಿನ ಬಂದಿಲ್ಲ ಎಂದು ಪ್ರತಿವಾದಿಗೆ ಸದರಿ ಜಮೀನನ್ನು ಖರೀದಿ ಮಾಡಿಕೊಳ್ಳುವುದಿಲ್ಲ ಎಂದು ನಾನು ಪ್ರತಿವಾದಿಗೆ ಹೇಳಿಲ್ಲ.

5. ಕೋಡ್ಲಾ ಗ್ರಾಮದಲ್ಲೂ ಸಹ ಸಾಕಷ್ಟು ಜಮೀನುಗಳು ಮಾರಾಟಕ್ಕೆ ಇರುತ್ತವೆ. ಬದನಿಹಾಳ ಗ್ರಾಮವು ನಿಮ್ಮ ಊರಿನಿಂದ 200 ಕಿ.ಮೀ. ದೂರ ಆಗುತ್ತದೆ ಯಾವ ಕಾರಣಕ್ಕೆ

ಖರೀದಿ ಮಾಡಿದ್ದೀರಿ ಎಂದರೆ ಪ್ರತಿವಾದಿಯು ಮಗಳ ಮದುವೆ ಇದೆ ಎಂದು ಹೇಳಿದ್ದರಿಂದ ನಾನು ಖರೀದಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಖರೀದಿ ಕರಾರು ಪತ್ರ ಆಗುವ ಒಂದು ವಾರ ಮುಂಚೆ ದಾವಾ ಜಮೀನಿಗೆ ಹೋಗಿರುತ್ತೇನೆ. ಸದರಿ ದಾವಾದ ಜಮೀನು ಬದನಿಹಾಳ ಗ್ರಾಮದಿಂದ ಎಷ್ಟು ದೂರ ಆಗುತ್ತದೆ ಎಂದು ಗೊತ್ತಿಲ್ಲ. ಸದರಿ ಜಮೀನು ವ್ಯವಹಾರ ಆಗುವ ಪೂರ್ವದಲ್ಲಿ ಆ ಗ್ರಾಮದಲ್ಲಿ ಒಂದು ಎಕರೆಗೆ ಎಷ್ಟು ಬೆಲೆ ಬಾಳುತ್ತದೆ ಎಂದು ಕೇಳಿರುವುದಿಲ್ಲ. ಸದರಿ ವ್ಯವಹಾರ ಆಗುವ ಪೂರ್ವದಲ್ಲಿ ದಾವಾದ ಜಮೀನಿನ ಬಗ್ಗೆ ಏನಾದರೂ ತಕರಾರು ಇದೆ ಎಂದು ಕೇಳಿ ತಿಳಿದುಕೊಂಡಿಲ್ಲ.

6. ದಾವಾ ಜಮೀನಿನ ಮಾತುಕತೆ ದಾವಾದ ಜಮೀನಿನಲ್ಲೇ ಆಗಿರುತ್ತದೆ. ಸದರಿ ಮಾತುಕತೆಯ ಸಮಯದಲ್ಲಿ ಇಬ್ಬರು ಸಾಕ್ಷಿದಾರರು ಇದ್ದರು. ಆ ಸಮಯದಲ್ಲಿ ಪಹಣಿಯನ್ನು ನೋಡಿರುತ್ತೇನೆ. ಸದರಿ ಮಾತುಕತೆಯಲ್ಲಿ 1 ಎಕರೆಗೆ ಎಷ್ಟು ಎಂದು ಮಾತುಕತೆ ಆಗಿಲ್ಲ. ಆ ದಿನ ನೀವು ಏನಾದರೂ ಬರವಣಿಗೆಯಲ್ಲಿ ಕಾಗದ ಏನಾದರೂ ಆಗಿದೆಯಾ ಹಣ ಏನಾದರೂ ಕೊಟ್ಟಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ಮಾತುಕತೆಯಾದ ನಂತರ ಇಸಾರ ಹಣ ಕೊಡಬೇಕು ಎಂಬ ಪದ್ಧತಿ ಗೊತ್ತಿದೆ ಆದರೆ ನಾನು ಕೊಟ್ಟಿಲ್ಲ. ನನ್ನ ಉಳಿತಾಯದ ಹಣವನ್ನು ಉಳಿತಾಯ ಖಾತೆಯಲ್ಲಿ ಇಡುತ್ತೇನೆ. ಮಾತುಕತೆಯ ಸಮಯದಲ್ಲಿ ನಿಮ್ಮ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ 2 ರಿಂದ 4 ಲಕ್ಷ ಹಣ ಇರಬಹುದು ಎಂದು ಉತ್ತರಿಸುತ್ತಾರೆ. ಸದರಿ ಬ್ಯಾಂಕಿನ ಖಾತೆಯ ಸ್ಟೇಟಮೆಂಟ್ ಹಾಜರುಪಡಿಸಬಹುದಾ ಎಂದರೆ ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನನ್ನ ಹತ್ತಿರ ಚೆಕ್ ಇರಲಿಲ್ಲ. 17-07-2019 ರಂದು ಅಥವಾ ಆ ಜುಲೈ 2019 ರಲ್ಲಿ ಮಾತುಕತೆಯ ಸಮಯದಲ್ಲಿ ನೀವು ಬ್ಯಾಂಕಿನಿಂದ ಹಣ ಏನಾದರೂ ತೆಗೆದಿದ್ದೀರಾ ಎಂದರೆ ಪ್ರತಿವಾದಿಗೆ ಕೊಡಲು ತೆಗೆದಿದ್ದೇನೆ ಎಂದು ಉತ್ತರಿಸುತ್ತಾರೆ. ಜುಲೈ-2019 ರಂದು ಬ್ಯಾಂಕಿನಿಂದ ಎಷ್ಟು ಹಣ ತೆಗೆದಿದ್ದೀರಿ ಎಂದು ಹೇಳಲು ಬರುತ್ತಾ ಎಂದರೆ ಹೇಳಲು ಬರುವುದಿಲ್ಲ ಆದರೆ ಬ್ಯಾಂಕ್ ಸ್ಟೇಟಮೆಂಟ ಕೊಡುತ್ತೇನೆ ಎಂದು ಉತ್ತರಿಸುತ್ತಾರೆ.

7. ನಿಪಿ-1 ಖರೀದಿ ಕರಾರು ಪತ್ರ ಕನ್ನಡ ಭಾಷೆಯಲ್ಲಿ ಇದೆ ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ವಿನೋದ್ ಮತ್ತು ಸಂಜು ರಾಠೋಡ ನನಗೆ ಅನುವಾದ ಮಾಡಿ ತಿಳಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಖರೀದಿ ಕರಾರು ಪತ್ರದಲ್ಲಿ ಏನು ಷರತ್ತು ಹಾಕಿದ್ದಾರೆ ಎಂದು ನನಗೆ ಗೊತ್ತು. 2019 ರಲ್ಲಿ ದಾವಾದ ಆಸ್ತಿಗೆ ಸಂಬಂಧಪಟ್ಟ ಸರ್ವೆ ದಾಖಲೆ ಮತ್ತು ಫಾರಂ ನಂ.-10 ಏನಾದರೂ ಇತ್ತಾ ಎಂದರೆ ನಾನು ನೋಡಿಲ್ಲ. ಖರೀದಿ ಕರಾರು ಪತ್ರ ರೂ.6,50,000/- ತೋರಿಸಿದ್ದು ಇನ್ನೂ 50 ಸಾವಿರ ಹಣ ಕೊಟ್ಟು ಖರೀದಿ ಪತ್ರವನ್ನು ಮಾಡಿಕೊಳ್ಳಬಹುದಾಗಿತ್ತು ಎಂದರೆ ಮಾಡಿಕೊಳ್ಳಬಹುದಾಗಿತ್ತು ಎಂದು ಉತ್ತರಿಸುತ್ತಾರೆ. ಯಾವ ಕಾರಣಕ್ಕೆ ಖರೀದಿ ಪತ್ರ ಮಾಡಿಕೊಂಡಿಲ್ಲ ಎಂದರೆ ಪ್ರತಿವಾದಿಯು ಮದುವೆ ಇದೆ ನಂತರ ಮಾಡುತ್ತೇನೆ ಎಂದು ಉತ್ತರಿಸುತ್ತಾರೆ. ಖರೀದಿ ಕರಾರು ಪತ್ರ ಆಗುವ ಸಮಯದಲ್ಲಿ ಅಥವಾ ಅದಕ್ಕಿಂತ ಮುಂಚಿತವಾಗಿ ದಾವಾದ ಜಮೀನನ್ನು ಎಷ್ಟು ಇದೆ ಎಂದು ಸರ್ವೆ ಮಾಡಿಸಿ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಆ ಸಮಯದಲ್ಲಿ ಸದರಿ ಜಮೀನು ಎಷ್ಟು ಇದೆ ಎಂದು ಸದರಿ ಜಮೀನನ್ನು ಸರ್ವೆ ಮಾಡಿಸಿ ಅದರ ಪ್ರಕಾರ ಎಷ್ಟು ವಿಸ್ತೀರ್ಣ ಇದೆ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿಲ್ಲ. ಆ ಸಮಯದಲ್ಲಿ ಸದರಿ ಜಮೀನು ಎಷ್ಟು ವಿಸ್ತೀರ್ಣ ಇದೆ ಎಂದು ತಿಳಿದುಕೊಂಡು ಮಾತನಾಡಿಲ್ಲ.

8. ಪ್ರತಿವಾದಿಯು ಬೇರೆ ಊರುಗಳಿಗೆ ಕೂಲಿ ಕೆಲಸ ಮಾಡಲು ಹೋಗುತ್ತಾರೆ ಎಂದರೆ ಸರಿ. ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಬದನಿಹಾಳದಲ್ಲಿ ಹೊಲಮನೆಯನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿ. ಪ್ರತಿವಾದಿ ಮತ್ತು ಸಂಜು ರಾಠೋಡ ಪರಿಚಯಸ್ಥರು ಇರುತ್ತಾರೆ. ಸಂಜು ರಾಠೋಡಗೆ ಹಣದ ಅವಶ್ಯಕತೆ ಇರುವುದರಿಂದ ನಿಮಗೆ ಸಾಲ ಕೇಳಿದರು ಎಂದರೆ ಸರಿಯಲ್ಲ. ಸಂಜು ರಾಠೋಡಗೆ ಪ್ರತಿವಾದಿ ಗೊತ್ತಿದ್ದರಿಂದ ಜಾಮೀನುದಾರನಾಗಲು ಪ್ರತಿವಾದಿಯ ಸಹಿ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ ಅವರಿಗೆ ಕನ್ನಡ ಓದಲು ಬರುವುದಿಲ್ಲ

ಆದರೆ ಮಾತನಾಡುತ್ತಾರೆ. ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ. ಆ ಸಮಯದಲ್ಲಿ ಖರೀದಿ ಕರಾರು ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಪ್ರತಿವಾದಿಗೆ ಗೊತ್ತಿರಲಿಲ್ಲ ಆದರೆ ಸಂಜು ರಾಠೋಡ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತು ಹಾಕಿಸಿರುತ್ತಾನೆ ಎಂದರೆ ವಿನೋದ ನಾಯಕ ಎಂದು ಉತ್ತರಿಸುತ್ತಾರೆ. ಸಂಜು ರಾಠೋಡನು ಲೋನ್ ಪಡೆದುಕೊಳ್ಳುವ ಸಲುವಾಗಿ ನೀವು ಬ್ಲ್ಯಾ ಂಕ್ ಚೆಕ್ ಅವರ ಹತ್ತಿರ ಇದೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಖರೀದಿ ಕರಾರು ಪತ್ರ ಆದ ನಂತರ ಉಳಿದ ಹಣ ಕೊಟ್ಟು ಖರೀದಿ ಪತ್ರ ಮಾಡಿಕೊಳ್ಳಲು 6 ತಿಂಗಳ ಒಳಗೆ ಕೇಳಿರುತ್ತೇನೆ. ನಂತರ 11-09-2020 ಕ್ಕೆ ಪ್ರತಿವಾದಿಗೆ ನೋಟಿಸ್ ಕಳುಹಿಸಿರುತ್ತೇನೆ. ಸದರಿ ನೋಟಿಸನ್ನು ವಾಲೋಜಿ ಚವಾಣ ಎಂಬ ವಕೀಲರು ನನ್ನ ಪರವಾಗಿ ನೋಟಿಸನ್ನು ಕಳುಹಿಸಿರುತ್ತಾರೆ. 25-09-2020 ರಂದು ಪ್ರತಿವಾದಿಯು ನಿಮ್ಮ ನೋಟಿಸಿಗೆ ಪ್ರತಿ ಉತ್ತರ ಕೊಟ್ಟು ಅದರಲ್ಲಿ ಸದರಿ ವ್ಯವಹಾರ ಸಂಜು ರಾಠೋಡಗೆ 4 ಲಕ್ಷ ರೂಪಾಯಿ ಲೋನ್ ಸಲುವಾಗಿ ಆಗಿದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಯು ಆ ರೀತಿ ಉತ್ತರ ನೀಡಿದ ನಂತರ ಪ್ರತಿವಾದಿಯ ವಿರುದ್ಧವಾಗಲೀ ಅಥವಾ ಸಂಜು ರಾಠೋಡರವರ ಮೇಲೆ ಪೊಲೀಸ್ ಕಂಪ್ಲೇಂಟ್ ಅಥವಾ ಕೇಸನ್ನು ಹಾಕಲು ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 25-09-2020 ರಂದು ರಿಪ್ಲೈ ನೋಟಿಸ್ ಬಂದಾಗ ಸಂಜು ರಾಠೋಡಗೆ ಲೋನ್ ಕೊಟ್ಟಿದ್ದಾರೆ ಎಂಬ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. 2 ವರ್ಷಗಳವರೆಗೆ ಸಂಜು ರಾಠೋಡ ಮತ್ತು ಪ್ರತಿವಾದಿ ಸುಳ್ಳು ಹೇಳುತ್ತಿದ್ದಾರೆ ಎಂದು ಎಲ್ಲಿಯೂ ದೂರು ನೀಡುವುದಾಗಲೀ ಕೇಸ್ ಮಾಡುವುದಾಗಲೀ ಮಾಡಿಲ್ಲ. 2020ರಲ್ಲಿ ಆ ವಿಷಯ ಗೊತ್ತಾದ ತಕ್ಷಣ ದಾವೆಯನ್ನು ಹಾಕಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಸದರಿ ವಿಷಯ ತಿಳಿದ 2 ವರ್ಷಗಳ ನಂತರ ಈ ದಾವೆಯನ್ನು ಹಾಕಿದ್ದೀರಿ ಎಂದರೆ ಸರಿ. 2020ರಲ್ಲಿ ಸದರಿ ವಿಷಯ ಗೊತ್ತಾದ ನಂತರ ಸಂಜು ರಾಠೋಡ ನಿಮಗೆ ಹಣ ಕೊಡುತ್ತೇನೆ ಎಂದು ಬಂದಿದ್ದರು ಎಂದರೆ ಸರಿಯಲ್ಲ.

9. ಸಂಜುನ ಗೆಳಯನಾದ ಬಾಬು ಎನ್ನುವವರು ಗೊತ್ತು. ಸಂಜು ಮತ್ತು ಬಾಬುರವರ ಮೂಲಕ ಹಣದ ಭದ್ರತೆಗಾಗಿ ಬಾಬುವಿನ ಮೂಲಕ ಖಾಲಿ ಚೆಕ್ ಕೊಟ್ಟಿದ್ದಾರೆ ಎಂದರೆ ಸರಿ. 2ನೇ ನೋಟಿಸ್ ಕೊಟ್ಟಾಗ ಮೊದಲಿನ ನೋಟಿಸಿಗೆ ಉತ್ತರ ಕೊಟ್ಟ ಬಗ್ಗೆ 2ನೆ ನೋಟಿಸಿನಲ್ಲಿ ಹೇಳಿಲ್ಲ. ಈ ದಾವೆಯಲ್ಲಿ ಏನೇನು ಬರೆದಿದ್ದಾರೆ ಎಂದು ಓದಿದ್ದೀರಾ ಎಂದರೆ ಓದಿದ್ದೇನೆ ಎಂದು ಉತ್ತರಿಸುತ್ತಾರೆ. 2020 ರಿಂದ 2022ವರೆಗೆ ಖರೀದಿ ಮಾಡುತ್ತೇನೆ ಎಂದು ಹೇಳಿ ನಿಮಗೆ ನೋಟಿಸ್ ನೀಡಲು ತೊಂದರೆ ಏನಾದರೂ ಇತ್ತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗೆ ಸಂಬಂಧಪಟ್ಟಂತೆ ಯಾವುದಾದರೂ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡಿನ ಪ್ರತಿ ಏನಾದರೂ ನಿಮ್ಮ ಹತ್ತಿರ ಇದೆಯಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

10. ಖರೀದಿ ಕರಾರು ಪತ್ರವನ್ನು ನೋಂದಣಿ ಕಚೇರಿ ಬಳಿ ಬೆರಳಚ್ಚು ಮಾಡಿಸಿರುತ್ತೇನೆ. ಖರೀದಿ ಕರಾರು ಪತ್ರವನ್ನು ಬೆರಳಚ್ಚು ಮಾಡಲು ಯಾರು ಮಾಹಿತಿ ನೀಡಿದ್ದಾರೆ ಎಂದರೆ ಪ್ರತಿವಾದಿ, ನಾನು ಮತ್ತು ಸಂಜು ರಾಠೋಡ ಎಂದು ಉತ್ತರಿಸುತ್ತಾರೆ. 6 ಲಕ್ಷ ಹಣ ಯಾವ ಮುಖಬೆಲೆಯ ನೋಟುಗಳಾಗಿದ್ದವು ಎಂದರೆ 500 ರ ನೋಟುಗಳು ಆಗಿದ್ದವು ಎಂದು ಉತ್ತರಿಸುತ್ತಾರೆ. ಸದರಿ ನೋಟುಗಳು ಹಳೆಯದಾಗಿತ್ತು ಎಂದು ಉತ್ತರಿಸಿ ಸಾಕ್ಷಿ ಮುಂದುವರೆದು ಹೊಸ ನೋಟುಗಳು ಎಂದು ಉತ್ತರಿಸುತ್ತಾರೆ. ಪ್ರತಿವಾದಿಯ ಮತ್ತು ನಿಮ್ಮ ಮಧ್ಯೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ 6 ಲಕ್ಷ ಕೊಟ್ಟಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ